S C.R.P.67

Form No.4
(Criminal)
Deposition
Sheets
(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ಃ 65–2022

**ಚಾ.ಸಾ.–05 ಫ್ರಾ.ಸಾ.–03**

| | |
|---|---|
| **ಸಾಕ್ಷಿದಾರರ ಹೆಸರು** | **ಮಂಜುನಾಥ** |
| **ತಂದೆಯ ಹೆಸರು** | **ಗಿರಿಯಯ್ಯ** |
| **ವಯಸ್ಸು** | **38 ವರ್ಷಗಳು** |
| **ಉದ್ಯೋಗ** | **ಕೂಲಿ ಕೆಲಸ** |
| **ವಾಸ** | **ರಾಗಿಮುದ್ದನಹಳ್ಳಿ ಗ್ರಾಮ, ಪಾಂಡವಪುರ ತಾಲ್ಲೂಕು** |

**ದಿನಾಂಕಃ 10.07.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ–1 ರವರ ಪರಿಚಯ ಇದೆ. ನಿಪಿ.2 ರಲ್ಲಿ ನನ್ನ ಸಹಿ ಇದೆ. ಸಾಕ್ಷಿ ಸಹಿ ನಿಪಿ.(ಬಿ), ಈಗ ತೋರಿಸುತ್ತಿರುವ ಭಾವಚಿತ್ರಗಳಲ್ಲಿ ನಾನು ಕಂಡುಬರುತ್ತೇನೆ. ಅವನ್ನು ನಿಪಿ.3 ಎಂದು ಗುರುತಿಸಲಾಯಿತು. ಅವುಗಳನ್ನು ಆರೋಪಿ ಚೇತನ್ ರವರ ಮನೆಯ ಬಳಿ ತೆಗೆಯಾಲಗಿತ್ತು. ಆ ಸಮಯದಲ್ಲಿ ನಾನು, ನವೀನ ಮತ್ತು ಜ್ಯೋತಿ ರವರು ಇದ್ದೆವು. ನಾನು ಸಹಿ ಮಾಡಿ 4–5 ವರ್ಷಗಳು ಆಗಿವೆ. ಜಗಳದ ವಿಚಾರದ್ಲಿ ಪೋಲೀಸರು ಬಂದಿದ್ದರು. ಸದರಿ ಗಲಾಟೆ ಚೇತನ್ ಮತ್ತು ಜ್ಯೋತಿ ರವರಿಗೆ ಆಗಿತ್ತು. ನನ್ನೆದುರಿಗೆ ಯಾರು ಜಾಗ ತೋರಿಸಿಲ್ಲ. ನಾನು ಬರುವ ಮೊದಲೇ ಆ ಸ್ಥಳದಲ್ಲಿ ಇದ್ದರು. ನಿಪಿ . 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸಂಜೆ 4.00 –5.00 ಗಂಟೆ ಸವಯದಲ್ಲಿ ಬರೆಯಲಾಗಿದೆ. ಕಾಲು ಗಂಟೆ ಸಮಯದಲ್ಲಿ ಬರೆಯಲಾಗಿದೆ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

2) ದಿಃ02.12.2021 ರಂದು ತಾರೀಖು ಆಗಿತ್ತು ಅಂದರೆ ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ಮತ್ತು ವಿನಯ್ ಕೂಮರ್ ರವರನ್ನು ಮಹಜರಿಗೆ ಸಾಕ್ಷಿಯಾಗಲು ಕರೆದರು ಎಂದರೆ ಸರಿ. ಆ ರೀತಿ ಚೇತನ್ ರವರ ಮನೆಯ ಬಳಿ ಕರೆದರು ಅಂದರೆ ಸರಿ. ನಾನು ಅದಕ್ಕೆ ಒಪ್ಪಿ ಸಾಕ್ಷಿಯಾಗಿ ಇದ್ದೇನೆ ಎಂದರೆ ಸರಿ. ಆಗ ಚಾಸಾ 1 ರವರು ಇಲ್ಲೇ ಗಲಾಟೆಯಾಗಿದ್ದೆಂದು ಪೋಲೀಸರಿಗೆ ಚೇತನ್ ರವರ ಮನೆಯ ಬಳಿ ತೋರಿಸಿಕೊಟ್ಟರು ಎಂದರೆ ಸರಿ. ಆಗ ನಿಪಿ. 6 ನ್ನು ತೆಗೆಯಲಾಗಿದೆ ಎಂದರೆ ಸರಿ. ಆ ನಂತರ ಪೊಲೀಸರು ನಮ್ಮ ಸಹಿಯನ್ನು ಪಡೆದುಕೊಂಡರು ಎಂದರೆ ಸರಿ. ಪೊಲೀಸರು ನನಗೆ ಸಹಿ ಮಾಡುವ ಮೊದಲು ಓದಿ ಹೇಳಿದರು ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ ಯು ಸಿ ವಕೀಲರಿಂದಃ</u>**

3) ಪೋಲೀಸರು ಸ್ಥಳಕ್ಕೆ ಬರಲು ನನಗೆ ನೋಟೀಸ್ ಕೊಟ್ಟಿಲ್ಲ. ಚಾಸಾ 1 ನಮ್ಮ ಜಾತಿಯವರಾಗಿದ್ದಾರೆ. ಅವರ ಜೊತೆ ನಾನು ಚೆನ್ನಾಗಿದ್ದೇನೆ ಎಂದರೆ ಸರಿ. ಅವರ ಗಂಡ ನನ್ನ ಸಂಬಂಧಿಕರು . ಸಾಕ್ಷಿ ಅವರು ಅಣ್ಣ-ತಮ್ಮಂದಿರು ಅನ್ನುತ್ತಾರೆ. ಅವರು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ. ಮಹಜರಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ. ಆ ಸಮಯದಲ್ಲಿ ಬೇರೆ ಇಬ್ಬರೂ -ಮೂವರು ಜನ ಇದ್ದರು. ಆರೋಪಿತರ ಮನೆಯ ಮುಂದೆ ಭಾವಚಿತ್ರ ತೆಗೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಅಕ್ಕ-ಪಕ್ಕದವರನ್ನು ವಿಚಾರಿಸಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಪೊಲೀಸರು ಸ್ಥಳಕ್ಕೆ ಬಂದು ಅರ್ಧ-ಮುಕ್ಕಾಲು ಗಂಟೆಯಾದ ಮೇಲೆ ನಾನು ಹೋಗಿದ್ದೇನೆ. ನಾನು ಸಹಿ

ಮಾಡುವಾಗ ಖಾಲಿ ಇತ್ತು ಅಂದರೆ ಸರಿ. ಗಲಾಟೆ ವಿಚಾರ ನನಗೆ ಗೊತ್ತಿಲ್ಲ ಅಂದರೆ ಸರಿ.

ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**

5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ